ಅಂತರರಾಷ್ಟ್ರೀಯ ಮಟ್ಟದಲ್ಲಿ ಕನ್ನಡದ ಸಿನಿಮಾ ಅಸ್ಮಿತೆಯ ಪ್ರತಿನಿಧಿ ಎಂದೇ ಪರಿಗಣಿತರಾಗಿರುವ ನಿರ್ದೇಶಕ ಗಿರೀಶ ಕಾಸರವಳ್ಳಿ ಅವರು ಹೊಸ ಕಾಲದ ಬೆಳವಣಿಗೆಯನ್ನು ಹೀಗೆ ವಿಶ್ಲೇಷಿಸುತ್ತಾರೆ:

'ಕೆಜಿಎಫ್' ಸರಣಿ ಚಿತ್ರಗಳ ಗೆಲುವು ಹೊಸ ಡಿಜಿಟಲ್ ಮಾದರಿಯ ಮಾರ್ಕೆಟಿಂಗ್ ಬಂದಮೇಲೆ ಆಗಿರುವ ಜಾದೂ. ಕೆಲವು ಭಾಷೆಗಳ ಚಿತ್ರಗಳಿಗೆ ಇದು ಹಿಂದೆಯೇ ಒಲಿದಿತ್ತು. ಈಗ ಕನ್ನಡ ಚಿತ್ರರಂಗಕ್ಕೆ ಒದಗಿಬಂತು. ಯಾರೂ ಹೀಗೆ ಯೋಚಿಸಿರಲಿಲ್ಲ. ಕನ್ನಡ ಚಿತ್ರೋದ್ಯಮಕ್ಕೆ ಒಂದು 'ವಿಸಿಬಿಲಿಟಿ'ಯನ್ನು ಈ ಬೆಳವಣಿಗೆ ದಕ್ಕಿಸಿಕೊಟ್ಟಿದೆ. 'ಕೆಜಿಎಫ್ – ಚಾಪ್ಟರ್ 1' ಯಶಸ್ವಿಯಾದದ್ದರ ಪಾಲೂ ಇದರಲ್ಲಿದೆ.

ವಸ್ತುವಿಷಯದ ದೃಷ್ಟಿಯಲ್ಲಿ ಸಿನಿಮಾ ವಿದ್ಯಾರ್ಥಿಗಳು ಇವತ್ತಿಗೂ ಮಲಯಾಳಂ ಸಿನಿಮಾಗಳನ್ನು ಉದಾಹರಿಸುತ್ತಿರುತ್ತಾರೆ. ಅಲ್ಲಿನ ಚಿತ್ರಗಳಲ್ಲಿ ಕೇರಳ ಮಣ್ಣಿನ ವಾಸನೆಯನ್ನು

## ಡಿಜಿಟಲ್ ಮಾರ್ಕೆಟಿಂಗ್ ಜಾದೂ

ಹಿಡಿಯುತ್ತಾರೆ. ನಮ್ಮಲ್ಲಿ ಎಲ್ಲ ಪರಿಕರಗಳು ಇದ್ದರೂ ಯಾಕೋ ಆ ಕೆಲಸ ಆಗುತ್ತಿಲ್ಲ. 1970–80ರ ದಶಕದಲ್ಲಿ ನಾನು 'ಎಫ್‌ಟಿಐಐ'ನಲ್ಲಿ ಕಲಿಯುತ್ತಿದ್ದಾಗ ಜಿತೇಂದ್ರ, ಧರ್ಮೇಂದ್ರ ಅವರ ಸಿನಿಮಾಗಳ ಕಾಲವಿತ್ತು. ಆಗಲೂ ದಕ್ಷಿಣ ಭಾರತದ ಸಿನಿಮಾಗಳ ಕಥೆಗಳು ಚೆನ್ನಾಗಿರುತ್ತವೆ ಎಂದು ಅಲ್ಲಿ ಅನೇಕರು ಮಾತನಾಡುತ್ತಿದ್ದರು. ಹಿಂಸೆ, ಥ್ರಿಲ್ಲರ್ ಹಾಗೂ ಸಸ್ಪೆನ್ಸ್ ಕಥನಗಳು ಮೊದಲಿನಿಂದಲೂ ಪ್ರೇಕ್ಷಕರನ್ನು ಹಿಡಿದಿಡುತ್ತಾ ಇರುವುದಕ್ಕೆ ಹಲವು ಉದಾಹರಣೆಗಳಿವೆ. ಮೂವತ್ತು ವರ್ಷಗಳ ಹಿಂದೆ ಇಂತಹುದೇ ಡಿಜಿಟಲ್ ಮಾರುಕಟ್ಟೆಯ ಅವಕಾಶ ಇದ್ದಿದ್ದರೆ ಇನ್ನಷ್ಟು ಚಿತ್ರಗಳು ದೊಡ್ಡ ಮಟ್ಟದ ಯಶಸ್ಸು ಪಡೆಯುತ್ತಿದ್ದವೋ ಏನೋ?

ರಾಜಮೌಳಿ ನಿರ್ದೇಶನದ ಚಿತ್ರಗಳು ಚಂದಮಾಮ, ಜನಪದ ಕಥೆಗಳ ಮಾದರಿಯವು. ದೃಶ್ಯ ಶ್ರೀಮಂತಿಕೆಯನ್ನೇ ನೆಚ್ಚಿಕೊಂಡು ಮೂಡುತ್ತಿವೆ. ಈಗಿನ ಚಿತ್ರಗಳ ತಯಾರಿಯಲ್ಲಿ, ತಂತ್ರದ ಅನುಸರಣೆಯಲ್ಲಿ ಲ್ಯಾಟಿನ್ ಅಮೆರಿಕನ್ ಹಾಗೂ ಕೊರಿಯನ್ ಚಿತ್ರಗಳ ಪ್ರಭಾವವೂ ಇದೆ.

ಹಿಂದೆ ನಮ್ಮಲ್ಲಿ ಯಾರಾದರೂ ಸಿನಿಮಾ ಮಾಡಿದರೆ ಪಕ್ಕದ ರಾಜ್ಯದ ಬಾಲಚಂದರ್ ಅಥವಾ ಶಾಂತಾರಾಂ ತರಹದ ನಿರ್ದೇಶಕರ ಕಿವಿಗೆ ಬಿದ್ದು, ಸಂವಾದ ನಡೆಯುತ್ತಿತ್ತಷ್ಟೆ. ಈಗ ಹಾಗಿಲ್ಲ. ಒಳ್ಳೆಯ ಕಥಾವಸ್ತುವಿನ ಸಿನಿಮಾ ಬಂದಿದೆ ಎಂದರೆ ದೇಶ–ವಿದೇಶಗಳ ಹಲವು ಸಿನಿಮಾ ವಿದ್ಯಾರ್ಥಿಗಳು ಅದರ ಬಗೆಗೆ ಮಾತನಾಡಲು ಆರಂಭಿಸುತ್ತಾರೆ. ಇದು ಒಳ್ಳೆಯ ಬೆಳವಣಿಗೆ.

ಪಂಡಿತರ ಮೇಲೆ ನಡೆದ ಹಿಂಸಾಚಾರವನ್ನು ಕಚ್ಚಾ ಆಗಿ ತೋರಿಸಿರುವ ಸಿನಿಮಾದ ವಸ್ತುವಿಷಯ ಸಾಕಷ್ಟು ಚರ್ಚೆಗೂ ಒಳಪಟ್ಟಿತು. ಕೆಲವೆಡೆ ಇದರ ಉಚಿತ ಪ್ರದರ್ಶನ ಏರ್ಪಡಿಸಿದ್ದನ್ನೂ ಕಂಡೆವು. ಸೃಜನಶೀಲ ಮಾಧ್ಯಮದ ವಿದ್ಯಾರ್ಥಿಗಳ ಪ್ರಕಾರ ಈ ಸಿನಿಮಾ ಯಶಸ್ಸು ಒಂದು ಆಕಸ್ಮಿಕವಷ್ಟೆ.

'ಕಾಶ್ಮೀರ್ ಫೈಲ್ಸ್' ಇನ್ನಷ್ಟು ಜನರನ್ನು ಚಿತ್ರಮಂದಿರಕ್ಕೆ ಎಳೆತರಬಹುದು ಎನ್ನುವ ಹೊತ್ತಿಗೆ ರಾಜಮೌಳಿ ನಿರ್ದೇಶನದ 'ಆರ್‌ಆರ್‌ಆರ್' ತೆರೆಕಂಡಿತು. ಅದರ ಅಬ್ಬರದಲ್ಲಿ ಕಾಶ್ಮೀರಿ ಪಂಡಿತರ ಆಕ್ರಂದನದ ಕಥನದ ಸದ್ದು ತಣ್ಣಗಾಯಿತು. 'ಆರ್‌ಆರ್‌ಆರ್' ಒಂದು ಸಾವಿರ ಕೋಟಿ ರೂಪಾಯಿ ಕ್ಲಬ್ ಸೇರಿಕೊಂಡಿತು ಎಂದು ಚಿತ್ರತಂಡವೇ ಅಧಿಕೃತವಾಗಿ ಘೋಷಿಸಿದ್ದು ಇನ್ನೊಂದು ವಿಶೇಷ. ಅದಾದ ನಂತರ 'ಕೆಜಿಎಫ್2' ಹಬ್ಬ ಶುರುವಾಗಿ, ಈಗಲೂ ಮುಂದುವರಿದಿದೆ.

### ಹಿಂಸೆ, ಥ್ರಿಲ್ಲರ್, ಸಸ್ಪೆನ್ಸ್

'ಶೋಲೆ' ಹಿಂದಿ ಸಿನಿಮಾದಲ್ಲಿ ಹಿಂಸೆ ಇತ್ತು. ಪಾತ್ರಗಳೂ ಹೆಚ್ಚಾಗಿದ್ದವು. ಅದರ ಕಥನದ ಚೌಕಟ್ಟು ದೀರ್ಘಾವಧಿ ಜನಮಾನಸದಲ್ಲಿ ಉಳಿಯಲು ಅದರಲ್ಲಿದ್ದ ಹಿಂಸೆ, ಥ್ರಿಲ್ಲರ್, ಸಸ್ಪೆನ್ಸ್ ಎಲ್ಲವೂ ಕಾರಣ ಎಂದು ನಿಸ್ಸಂಶಯವಾಗಿ ಹೇಳಬಹುದು. ಕನ್ನಡದಲ್ಲಿ 'ಸುಧಾ' ವಾರಪತ್ರಿಕೆಯಲ್ಲೇ ಧಾರಾವಾಹಿಯಾಗಿ ಬಂದಿದ್ದ 'ಅಂತ' ಸಿನಿಮಾ ಆದಮೇಲೆ ಅದರ ಕವಲುಗಳಂತೆ ಅಸಂಖ್ಯ ಚಿತ್ರಗಳು ಹಲವು ಭಾಷೆಗಳಲ್ಲಿ ಬಂದವು ಎಂದು ಅದರ ನಿರ್ದೇಶಕ ಎಸ್.ವಿ. ರಾಜೇಂದ್ರ ಸಿಂಗ್ ಬಾಬು ಒಮ್ಮೆ ಹೇಳಿದ್ದರು. ಅಂತಹ ಸಮಾಜೋ–ರಾಜಕೀಯ ವಿಷಯವನ್ನು ಬರೆದಿದ್ದ ಎಚ್. ಕೆ. ಅನಂತರಾವ್ ಅವರಿಗೂ ನಂತರ ಅಂತಹ ಇನ್ನೊಂದು ಬರವಣಿಗೆ




ಸದ್ಯವೇ ಬಿಡುಗಡೆಯಾಗಲಿರುವ, ಅಮೀರ್ ಖಾನ್ ಅಭಿನಯದ 'ಲಾಲ್ ಸಿಂಗ್ ಛಡ್ಡಾ' ಸಿನಿಮಾವಾದರೂ ಬಾಲಿವುಡ್ ಅಂಗಳದಲ್ಲಿ ಗೆಲುವಿನ ಚೆಂಡು ಪುಟಿದೇಳುವಂತೆ ಮಾಡುತ್ತದೆಯೋ ಕಾದು ನೋಡಬೇಕು